## ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ.

**ಸಿಸಿ ನಂ.1666/2022**

ಫಿರ್ಯಾದಿಃ ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ

-ಃಃ ವಿರುದ್ದ ಃಃ-

ಆರೋಪಿ/ತರುಃ 01. ನರಸಪ್ಪಾ ತಂದೆ ನಿಂಗಪ್ಪಾ ಬಡದಾಳ,
ವಃ 53 ವರ್ಷ, ಉಃ ಒಕ್ಕಲುತನ,
ವಾಸಃ ದಿಕ್ಸಂಗಾ(ಕೆ) ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

02. ಶಂಕರಪ್ಪಾ @ ಶಂಕರಲಿಂಗ ತಂದೆ ಷಣ್ಮುಖಪ್ಪಾ ನಿಂಬರ್ಗಿ,
ವಃ 47 ವರ್ಷ, ಉಃ ಒಕ್ಕಲುತನ,
ವಾಸಃ ಗೌರ(ಬಿ) ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

----

**ದೋಷಾರೋಪಣೆ**

ನಾನು ಶ್ರೀ ಅನಿಲ ಅಮಾತೆ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 08.10.2021 ರಂದು ಸಂಜೆ 05-30 ಗಂಟೆಯ ಸುಮಾರಿಗೆ ಅಫಜಲಪೂರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ದಿಕ್ಸಂಗಾ(ಕೆ) ಗ್ರಾಮದ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಫಿರ್ಯಾದಿ ಚಾಸಾ-1 ಗೊಲ್ಲಾಳಪ್ಪ, ಚಾಸಾ-4 ಬಸವರಾಜ ಮತ್ತು ಚಾಸಾ-5 ಲಾಯಕ ಅಲಿ ರವರು ಮಾತನಾಡುತ್ತಾ ಕುಳಿತಾಗ 1 ಮತ್ತು 2ನೇ ಆರೋಪಿತರಾದ ನೀವುಗಳು ಫಿರ್ಯಾದಿ ಚಾಸಾ-1 ಗೊಲ್ಲಾಳಪ್ಪ ರವರು 1ನೇ ಆರೋಪಿತನ ಅಣ್ಣನ ಹೆಂಡತಿಯಾಂದಿಗೆ ಸಲುಗೆಯಿಂದ ಇರುವದನ್ನು ಸಹಿಸಿಕೊಳ್ಳದೇ ದ್ವೇಷ ಸಾಧಿಸಿ ಫಿರ್ಯಾದಿ ಚಾಸಾ-1 ಗೊಲ್ಲಾಳಪ್ಪ ರವರಿಗೆ ಅಂಜಿಕೆ ಹಾಕುವ ಸಲುವಾಗಿ ತಡೆದು ನಿಲ್ಲಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.341 ಸಹವಾಚಕ ಕಲಂ.34ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

2. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2ನೇ ಆರೋಪಿತರಾದ ನೀವುಗಳು ಫಿರ್ಯಾದಿ ಚಾಸಾ-1 ಗೊಲ್ಲಾಳಪ್ಪ ರವರು 1ನೇ ಆರೋಪಿತನ ಅಣ್ಣನ ಹೆಂಡತಿಯಾಂದಿಗೆ ಸಲುಗೆಯಿಂದ ಇರುವದನ್ನು ಸಹಿಸಿಕೊಳ್ಳದೇ ಈ ದ್ವೇಷದ ಹಿನ್ನಲೆಯಲ್ಲಿ ಫಿರ್ಯಾದಿ ಚಾಸಾ-1 ರವರ ಜೊತೆಗೆ ಜಗಳ ತೆಗೆದು

ಚಾಸಾ-1 ರವರಿಗೆ ಅಂಜಿಕೆ ಹಾಕುವ ಸಲುವಾಗಿ ಇಬ್ಬರೂ ತಮ್ಮ ಕೈಯಿಂದ ಎದೆಯ ಮೇಲಿನ ಅಂಗಿ ಹಿಡಿದು ಜಗ್ಗಾಡಿ-ಎಳೆದಾಡಿ ಕಪಾಳದ ಮೇಲೆ ಮತ್ತು ಬೆನ್ನಿನ ಮೇಲೆ ಹೊಡೆ ಬಡೆ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 323 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವೆ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2ನೇ ಆರೋಪಿತರಾದ ನೀವುಗಳು ಫಿರ್ಯಾದಿ ಚಾಸಾ-1 ಗೊಲ್ಲಾಳಪ್ಪ ರವರು 1ನೇ ಆರೋಪಿತನ ಅಣ್ಣನ ಹೆಂಡತಿಯಾಂದಿಗೆ ಸಲುಗೆಯಿಂದ ಇರುವದನ್ನು ಸಹಿಸಿಕೊಳ್ಳದೇ ಈ ದ್ವೇಷದ ಹಿನ್ನಲೆಯಲ್ಲಿ ಫಿರ್ಯಾದಿ ಚಾಸಾ-1 ರವರಿಗೆ ಅಂಜಿಕೆ ಹಾಕುವ ಸಲುವಾಗಿ ಚಾಸಾ-1 ರವರ ಜೊತೆಗೆ ಜಗಳ ತೆಗೆದು, ಚಾಸಾ-1 ರವರಿಗೆ ಶಿರವಾಳದಲ್ಲಿ ನ್ಯಾಯ ಮಾಡುವದು ಇದೇ ರಂಡೀ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಅವಮಾನ ಪಡಿಸಿದ್ದು, ಚಾಸಾ-1 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ-1 ರವರನ್ನು ಉದ್ರೇಕಿಸಿದ ಕಾರಣ ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.34ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

4. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2ನೇ ಆರೋಪಿತರಾದ ನೀವುಗಳು ಫಿರ್ಯಾದಿ ಚಾಸಾ-1 ಗೊಲ್ಲಾಳಪ್ಪ ರವರು 1ನೇ ಆರೋಪಿತನ ಅಣ್ಣನ ಹೆಂಡತಿಯಾಂದಿಗೆ ಸಲುಗೆಯಿಂದ ಇರುವದನ್ನು ಸಹಿಸಿಕೊಳ್ಳದೇ ಈ ದ್ವೇಷದ ಹಿನ್ನಲೆಯಲ್ಲಿ ಫಿರ್ಯಾದಿ ಚಾಸಾ-1 ರವರಿಗೆ ಅಂಜಿಕೆ ಹಾಕುವ ಸಲುವಾಗಿ ಚಾಸಾ-1 ರವರ ಜೊತೆಗೆ ಜಗಳ ತೆಗೆದು, ಚಾಸಾ-1 ರವರಿಗೆ ಶಿರವಾಳ ಗ್ರಾಮಕ್ಕೆ ಬಾ ಅಲ್ಲೆ ನಿನ್ನ ನ್ಯಾಯ ಮಾಡುವದು ಇದೆ, ನೀನು ಬರದೇ ಇದ್ದರೆ ನಿನಗೆ ಖಲಾಸ ಮಾಡುತ್ತೇವೆ ಅಂತ ಜೀವ ಬೆದರಿಕೆ ಹಾಕಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.506 ಸಹವಾಚಕ ಕಲಂ.34ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1

ಆ-2

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕಃ 24-01-2025

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ. ಅಫಜಲಪೂರ.